## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.491/2025

| | | |
|---|---|---|
| ಸಾಕ್ಷಿದಾರರ ಹೆಸರು | ಅಹಮ್ಮದ್ ಸಲ್ಮಾನ್ | ಸಿ.ಡಬ್ಲ್ಯು-12 |
| ತಂದೆಯ ಹೆಸರು | ಮೊಹಮ್ಮದ್ ಗೌಸ್ | ಪಿ .ಡಬ್ಲ್ಯೂ-4 |
| ವಯಸ್ಸು | 25 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ವ್ಯಾಪಾರ | ದಿನಾಂಕಃ |
| ವಾಸಃ | ಅಣಲೇಕೊಪ್ಪ, ಸಾಗರ | 03.11.2025 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಸಾಕ್ಷಿಯು ನಿಪಿ-2 ಮತ್ತು 3 ರ ಫೋಟೋಗಳಲ್ಲಿನ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ದಿನಾಂಕ 04.10.2024 ರಂದು ಸಂಜೆ 05.00 ಗಂಟೆ ಸುಮಾರಿಗೆ ಸಾಗರ ಪೇಟೆ ಪೋಲಿಸ್ ಠಾಣೆಯ ಮುಂಭಾಗದಲ್ಲಿ ಅಪಘಾತದ ವಿಚಾರವಾಗಿ ತೆಗೆದಿದ್ದು, ಆ ಸಂದರ್ಭದಲ್ಲಿ ಮಹಜರ್ ಮಾಡಿದ್ದು, ನಿಪಿ-2 ಮತ್ತು 3 ರಲ್ಲಿ ಕಾಣುವ ಬೈಕ್ ಮತ್ತು ಕಾರು ಇತ್ತು. ಸದರಿ ಮಹಜರಿನ ಕಾಲಕ್ಕೆ ಚಾ.ಸಾ 2 ರವರು ವಾಹನಗಳನ್ನು ತೋರಿಸಿದ್ದು, ನಾನು ಮತ್ತು ಚಾ.ಸಾ 13 ರವರು ಪಂಚನಾಮೆಗೆ ಸಾಕ್ಷಿದಾರರಾಗಿ ಸಹಿ ಮಾಡಿದ್ದೇವೆ. ದಿನಾಂಕ 04.10.2024 ರ ವಾಹನ ತಡೆ ಪಂಚನಾಮೆ ಮತ್ತು ನೋಟೀಸ್ ಗಳನ್ನು ನಿಪಿ-8 ಮತ್ತು ನಿಪಿ-9 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಮತ್ತು ನಿಪಿ-9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ.ಐ.ಎನ್.ಎಸ್ ರವರಿಂದಃ-**

**1.** ನನಗೆ ಕನ್ನಡ ಓದಲು ಬರುತ್ತದೆ. ಬರೆಯಲು ಅಲ್ಪ ಸ್ವಲ್ಪ ಬರುತ್ತದೆ. ವಾಹನದ ಮಾಲೀಕರು ನಿಪಿ-8 ಮತ್ತು ನಿಪಿ-9 ರ ಕಾಲಕ್ಕೆ ಹಾಜರಿದ್ದರೇ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಹನಗಳ ಮಾಲೀಕರು ಯಾರು ಎನ್ನುವ ಮಾಹಿತಿಯನ್ನು ಪೋಲಿಸರು ನನಗೆ ಹೇಳಿಲ್ಲ. ಠಾಣಾ ಆವರಣದಲ್ಲಿ ನಿಪಿ-2 ಮತ್ತು 3 ರಲ್ಲಿ ಕಾಣುವ ವಾಹನಗಳನ್ನು ಯಾರು ತಂದು ನಿಲ್ಲಿಸಿದರು ಎಂದು ನನಗೆ ಮಾಹಿತಿ ಇಲ್ಲ. ಚಾ.ಸಾ 2 ರವರು ನನ್ನ ಸಂಬಂಧಿಕರಾಗಿದ್ದು, ಅವರು ಕರೆದಿದ್ದರಿಂದ ನಾನು ಠಾಣಾ ಆವರಣಕ್ಕೆ ಹೋಗಿದ್ದೆ ಎಂದರೆ ಸರಿ. ಠಾಣಾ ಆವರಣಕ್ಕೆ ಬರುವಂತೆ ಪೋಲಿಸರು ನನ್ನನ್ನು ಖುದ್ದಾಗಿ ಕರೆದಿಲ್ಲ. ನಿಪಿ-8 ರ

ಸ್ಥಳದ ಚಕ್ಕು ಬಂದಿ ನನಗೆ ಹೇಳಲು ಆಗುವುದಿಲ್ಲ. ನಿಪಿ–8 ಅನ್ನು ಬರೆಯಲು ನಾನು ಸ್ವತಃ ಹೇಳಿ ಬರೆಯಿಸಿಲ್ಲ. ಸದರಿ ಮಹರಿನ ಕಾಲಕ್ಕೆ ಹಾಜರಿದ್ದ ಪೋಲಿಸರ ಹೆಸರುಗಳು ನನಗೆ ಗೊತ್ತಿಲ್ಲ. ನಿಪಿ–8 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.